ದಿನಾಂಕಃ **14.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಕೆ.ಜಿ.ಎಸ್ ರವರಿಂದಃ

ದಾವಾ ಸ್ವತ್ತನ್ನು ಕುರಿತು ವಾದಿ ಮತ್ತು ನಮ್ಮಗಳ ನಡುವೆ ಈಗಾಗಲೆ ಮೂಲ ದಾವಾ ಸಂ.**2705/2013** ರಂತೆ ಪ್ರಕರಣ ತೀರ್ಮಾನವಾಗಿರುತ್ತದೆ ಎಂದರೆ ಸರಿ. ಮೂಲ ದಾವಾ ಸಂ.**2705/2013** ನಿಡಿ-**6** ಪ್ರಕರಣದಲ್ಲಿ ಹೊರ ಬಂದ ತೀರ್ಪನ್ನು ಕುರಿತು ಅಪೀಲು ಅಥವಾ ರಿವಿಜನ್ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಾದಿ ಮತ್ತು ನನ್ನ ತಂದೆ ರಾಜೇಂದ್ರ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ತಾತ ಜಯರಾಮ್ ಶೆಟ್ಟಿ ರವರಿಗೆ ವಾದಿ ಮತ್ತು ನನ್ನ ತಂದೆಯನ್ನು ಹೊರತು ಪಡಿಸಿ ಬೇರೆ ಗಂಡು ಸಂತಾನ ಇರಲಿಲ್ಲ ಮತ್ತು ಉಳಿಕೆ ಎಲ್ಲಾ ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ನನ್ನ ತಾತ ಜಯರಾಮ್ ರವರಿಗೆ ಒಟ್ಟು **4** ಜನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು **6** ಜನ. ರಾಜೇಂದ್ರ, ದೊರೆರಾಜ್, ಗಜೇಂದ್ರ , ರಮೇಶ್, ರವಿ ಮತ್ತು ಅಶೋಕ್ ?ನನ್ನ ತಾತನ ಒಟ್ಟು **6** ಜನ ಗಂಡು ಮಕ್ಕಳು. ನ್ನನ ತಾತ ಜಯರಾಮ್ ಶೆಟ್ಟಿ ರವರ ಮರಣ ನಂತರ ನಾನು ವಾದಿಗಳು ನಡುವೆ ಒಂದು ಒಡಂಬಡಿಕೆ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಾತ ಜಯರಾಮ್ ಶೆಟ್ಟಿ ರವರ ಮರಣ ನಂತರ ವಿಭಾಗಗೊಂಡಿರುವುದಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ **15 x** ಉತ್ತರ ದಕ್ಷಿಣ **30** ಅಡಿ ಸೇರಿದಂತೆ **5** ಅಡಿ ಪ್ಯಾಸೇಜ್ ಇರುತ್ತದೆ.ನನ್ನ ತಾತ ಜಯರಾಮ್ ಶೆಟ್ಟಿ ಮರಣ ನಂತರ

ದಾವಾ ಸ್ವತ್ತನ್ನು ನಮ್ಮ ಕುಟುಂಬದ ಸದಸ್ಯರ ನಾಡುವೆ ವಿಭಾಗ ಮಾಡಿಕೊಳ್ಳಲು ಆಗಿಲ್ಲ ಎಂದರೆ ಸಾಕ್ಷಿಯು ನಮ್ಮ ಅಜ್ಜಿ ಜೀವಂತ ಇದ್ದರು ಅದಕ್ಕಾಗಿ ವಿಭಾಗಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಮರಣ ನಂತರವು ಸಹ ದಾವಾ ಸ್ವತ್ತನ್ನು ನಾವುಗಳು ವಿಭಾಗ ಮಾಡಿಕೊಂಡಿಲ್ಲ. ನನ್ನ ತಾತನ ಮರಣ ನಂತರ ನನ್ನ ತಾತನ ಮಕ್ಕಳ ನಡುವೆ ವಿಭಾಗ ಆಗಬೇಕು ಎಂದು ವಾದಿ ಮತ್ತು ಪ್ರತಿವಾದಿಗಳು ನಡುವೆ ಒಡಂಬಡಿಕೆ ಆಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿ ಸಾಯುವರೆಗೂ ನನ್ನ ಚಿಕ್ಕಪ್ಪ ಅಶೋಕ್ ವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿ ನಮ್ಮ ಜೊತೆ ವಾಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ರೆಷನ್ ಕಾರ್ಡ್ ಅಥವಾ ಚುನಾವಣೆಯ ಗುರುತಿನ ಚೀಟಿ ನನ್ನ ಬಳಿ ಇರುವುದಿಲ್ಲ. ನನ್ನ ತಾತನ ಎಲ್ಲಾ ಮಕ್ಕಳ ನಡುವೆ ಒಡಂಬಡಿಕೆ ಆದ ನಂತರ ಮತ್ತು ನನ್ನ ತಂದೆಯ ಮರಣ ನಂತರ ದಾವಾ ಸ್ವತ್ತಿನಲ್ಲಿ ಬಿಲ್ಡಿಂಗ್ ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಒಡಂಬಡಿಕೆ ಯಂತೆ ತಲ ಮಹಡಿ ಮತ್ತು **1**ನೇ ಮಹಡಿ ಮನೆ ಮಾತ್ರ ನನ್ನ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಒಡಂಬಡಿಕೆ ಯಂತೆ ದಾವಾ ಸ್ವತ್ತಿನಲ್ಲಿ **2** ಮತ್ತು **3** ಮಹಡಿಯ ವಾದಿಯ ವಿಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ದಾವಾ ಸ್ವತ್ತಿನಲ್ಲಿನ **2**ನೇ ಮಹಡಿ ಮನೆಯನ್ನು ನೊಂದಾವಣೆ ಮಾಡಿ ಕೊಟ್ಟಿರುತ್ತೇವೆ. ಒಡಂಬಡಿಕೆಯಂತೆ ನನಗೆ ದಾವಾ ಸ್ವತ್ತಿನಲ್ಲಿ ತಲ ಮಹಡಿ ಮತ್ತು

**1**ನೇ ಮಹಡಿಯಲ್ಲಿ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿನ **3**ನೇ ಮಹಡಿಯ ಮೇಲೆ ಒಡಂಬಡಿಕೆ ಯಂತೆ ನಾನು ವಾದಿಯ ಹೆಸರಿಗೆ ಕ್ರಯ ಪತ್ರ ಬರೆದುಕೊಡುವ ಬಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬಾಧ್ಯತೆಯನ್ನು ವಾದಿಯು ನನ್ನ ವಿರುದ್ದ ಪ್ರತಿಪಾದಿಸಿದ್ದಾಗ ಈ ಕಾರಣಕ್ಕೆ ವ್ಯಾಜ್ಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
**5**ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.